ದಿನಾಂಕ: 22.03.2021 ರಂದು ಬೆಳಗ್ಗೆ 10.30 ಗಂಟೆಗೆ ಕಾಮಾಕ್ಷಿಪಾಳ್ಯ ವಾರ್ಡ್ ನಂ. 101 ರಲ್ಲಿ ಶ್ರೀ ಎ.ಎಸ್. ರಮೇಶ್, ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು:-**

1. ಶ್ರೀ ಎ.ಎಸ್. ರಮೇಶ್, ನೋಡಲ್ ಅಧಿಕಾರಿಗಳು
2. ಶ್ರೀ ಸೋಮಶೇಖರ್ ಸಹಾಯಕ ಅಭಿಯಂತರರು, (ಪ್ರಭಾರ) ವಾರ್ಡ್ ನಂ. 101 ಕಾಮಾಕ್ಷಿಪಾಳ್ಯ
3. ಶ್ರೀ ಬಿ.ಎ. ಶಂಕರ್ ನಾಯಕ್, ಸಹಾಯಕ ಅಭಿಯಂತರರು, ಬೆಸ್ಕಾಂ
4. ಶ್ರೀ ಸಿದ್ದರಾಜು, ಸಹಾಯಕ ಅಭಿಯಂತರರು, ಬೆಸ್ಕಾಂ
5. ಶ್ರೀ ಆನಂದ್, ವಿ.ಎನ್. ಎ.ಎಸ್.ಐ. ಕಾಮಾಕ್ಷಿಪಾಳ್ಯ, ಸಂಚಾರಿ ಪೋಲಿಸ್ ಠಾಣೆ,
6. ಶ್ರೀ ಬಸವರಾಜು, ಹೆಡ್ ಕಾನ್ಸ್‌ಟೇಬಲ್, ಬಸವೇಶ್ವರನಗರ
7. ಶ್ರೀಮತಿ ರಾಜೇಶ್ವರಿ, ಹಿರಿಯ ಆರೋಗ್ಯ ಪರಿವೀಕ್ಷಕರು
8. ಶ್ರೀ ವೆಂಕಟೇಶ್, ಕಂದಾಯ ಇಲಾಖೆ
9. ಶ್ರೀ ಬಿ.ವಿ. ವಾಸುದೇವ , ಅಸೆಸ್ಸರ್ 101
10. ಶ್ರೀಮತಿ ರೂಪಾ, ಕಿರಿಯ ಆರೋಗ್ಯ ಪರಿವೀಕ್ಷಕರು
11. ಶ್ರೀ ಅನಿಲ್ ರಂಗಣ್ಣ, ಸದಸ್ಯರು.
12. ಶ್ರೀ ಉಮಾಶಂಕರ್, ಸದಸ್ಯರು
13. ಶ್ರೀ ಅರವಿಂದ್, ಸದಸ್ಯರು
14. ಶ್ರೀ ಶ್ರೀನಿವಾಸ್.ಎ. ಸದಸ್ಯರು
15. ಶ್ರೀ ಗಂಗಯ್ಯ, ಸದಸ್ಯರು
16. ಶ್ರೀ ರವೀಂದ್ರನಾಥ್, ಸದಸ್ಯರು
17. ಶ್ರೀ ರಾಜೇಶ್.ಎಂ. ಸದಸ್ಯರು
18. ಶ್ರೀ ಗೋಪಾಲ್ ಕೃಷ್ಣ, ಸದಸ್ಯರು

ದಿನಾಂಕ: 08.03.2021 ರಂದು ನಡೆದ ಸಭೆಯಲ್ಲಿ ಹಲವಾರು ವಿಷಯಗಳನ್ನು ಚರ್ಚಿಸಿ, ಅದಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಪರಿಹಾರ ತೆಗೆದುಕೊಳ್ಳಲಾಗಿರುತ್ತದೆ. ಹಾಗು ದಿನಾಂಕ: 22.03.2021ರಂದು ಬೆಳಗ್ಗೆ10.30 ಗಂಟೆಗೆ ವಾರ್ಡ್ ನಂ. 101 ಕಾಮಾಕ್ಷಿಪಾಳ್ಯ ಎಸ್.ಬಿ.ಐ. ಆಫೀಸರ್ಸ್ ಸಮುದಾಯ ಭವನ, ಎಸ್.ಬಿ.ಐ. ಕಾಲೋನಿ, ಬಸವೇಶ್ವರನಗರ, ಕಾಮಾಕ್ಷಿಪಾಳ್ಯ, ಇಲ್ಲಿ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು.

1. ಶ್ರೀ ಅನಿಲ್ ರಂಗಣ್ಣ, ಮಾತನಾಡುತ್ತಾ, ಮಾಗಡಿ ಮುಖ್ಯ ರಸ್ತೆಯಲ್ಲಿ ಬೆಸ್ಕಾಂ ವತಿಯಿಂದ ಕೇಬಲ್ ಅಳವಡಿಸಲು ಅನುಮತಿ ಪಡೆಯದೆ ರಸ್ತೆಯನ್ನು ಕತ್ತರಿಸಿರುವುದರಿಂದ ಈ ರಸ್ತೆಯಲ್ಲಿ ಓಡಾಡುವ ವಾಹನ ಸವಾರರಿಗೆ ತೊಂದರೆಯಾಗುತ್ತಿರುವುದಾಗಿ ಸಭೆಗೆ ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಸಂಬಂಧಪಟ್ಟ ಬೆಸ್ಕಾಂ ಇಲಾಖೆಯವರಿಗೆ ಕೂಡಲೇ ದುರಸ್ಥಿಪಡಿಸುವಂತೆ ಪತ್ರ ಬರೆಯಲು ವಾರ್ಡ್ ಕಾರ್ಯದರ್ಶಿಗೆ ತಿಳಿಸಿದರು.
2. ಶ್ರೀ ಉಮಾಶಂಕರ್ ರವರು ಮಾತನಾಡುತ್ತಾ, ಮ್ಯಾಕ್ಸ್ ಮುಲ್ಲರ್ ಶಾಲೆ ಹತ್ತಿರವಿರುವ ಖಾಲಿ ಜಾಗದಲ್ಲಿ ಸಾರ್ವಜನಿಕರು ರಾತ್ರಿಯ ಸಮಯದಲ್ಲಿ ಕಸವನ್ನು ಹಾಕುತ್ತಿರುವುದರಿಂದ ಅಲ್ಲಿನ ನಿವಾಸಿಗಳಿಗೆ ತೊಂದರೆಯಾಗುತ್ತಿರುವುದಾಗಿ ಸಭೆಗೆ ತಿಳಿಸಿದರು. ಇದರ ಬಗ್ಗೆ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.
3. ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ ಒಂದು ದಿನಕ್ಕೆ 100 ಕೋವಿಡ್ ಪರೀಕ್ಷೆಗಳನ್ನು ಮಾಡುತ್ತಿರುವುದಾಗಿ ಸಭೆಗೆ ತಿಳಿಸಿದರು.

ಪು.ತಿ.ನೋ.

Scanned by CamScanner

4. ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರೊಬ್ಬರು ಮಾತನಾಡುತ್ತಾ, ಎಸ್.ಬಿ.ಐ. ಆಫೀಸರ್ಸ್ ಕಾಲೋನಿಯ ಮುಖ್ಯ ರಸ್ತೆಯಲ್ಲಿ ವಾಹನ ದಟ್ಟಣೆ ಜಾಸ್ತಿಯಾಗುತ್ತಿರುವುದರಿಂದ ಸದರಿ ರಸ್ತೆಯನ್ನು One Way ಆಗಿ ಮಾಡಬೇಕೆಂದು ಸಭೆಯಲ್ಲಿ ಕೋರಿದರು. ಇದಕ್ಕೆ ಉತ್ತರವಾಗಿ ಸಭೆಗೆ ಹಾಜರಿದ್ದ ಎ.ಎಸ್.ಐ. ಸಂಚಾರಿ ಪೋಲಿಸ್ ಠಾಣೆ ರವರು ವಸತಿ ಪ್ರದೇಶದಲ್ಲಿ One Way ಮಾಡುವುದು ಸಾಧ್ಯವಿಲ್ಲವೆಂದು ಸಭೆಗೆ ತಿಳಿಸಿದರು.

5. ಶ್ರೀ ಉಮಾಶಂಕರ್ ರವರು ಮಾತನಾಡುತ್ತಾ, ಆಲದ ಮರ ಪಾರ್ಕ್‌ನಲ್ಲಿ ಕಾಮಗಾರಿ ನಡೆಯುತ್ತಿದ್ದು, ಸದರಿ ಕಾಮಗಾರಿಯು ಗುಣಮಟ್ಟದಿಂದ ಕೂಡಿರುವುದಿಲ್ಲವೆಂದು ಸಭೆಗೆ ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಸಂಬಂಧಪಟ್ಟವರಿ ತಿಳಿಸಿ ಕ್ರಮ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

6. ಶ್ರೀ ಅನಿಲ್ ರಂಗಣ್ಣ ರವರು ಮಾತನಾಡುತ್ತಾ, ಗಾಡಿ ಮುದ್ದಣ್ಣ ರಸ್ತೆಯಲ್ಲಿ, ಬಿ.ಡ್ಬ್ಲ್ಯೂ.ಎಸ್.ಎಸ್.ಬಿ. ಸಬ್‌ಲೇನ್ ವತಿಯಿಂದ ಪೈಪ್ ಅಳವಡಿಸಲು ರಸ್ತೆಯನ್ನು ಕತ್ತರಿಸಿದ್ದು, ಸದರಿ ರಸ್ತೆಯನ್ನು ದುರಸ್ತಿಪಡಿಸದೆ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದಾಗಿ ತಿಳಿಸಿದರು. ಇದರ ಬಗ್ಗೆ ಸಂಬಂಧಪಟ್ಟವರಿಗೆ ತಿಳಿಸಲು ನೋಡಲ್ ಅಧಿಕಾರಿಗಳು ವಾರ್ಡ್ ಸಮಿತಿ ಕಾರ್ಯದರ್ಶಿ ರವರಿಗೆ ಸೂಚಿಸಿದರು.

7. ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಬೇಸಿಗೆ ಕಾಲ ಪ್ರಾರಂಭವಾಗುವುದರಿಂದ ಬಿ.ಡ್ಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳು ಎಲ್ಲಾ ಸಮಸ್ಯೆ ಇರುವ ಪ್ರದೇಶಗಳಿಗೆ ಭೇಟಿ ನೀಡಿ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

8. ಹಿರಿಯ ನಾಗರೀಕರು ಮಾತನಾಡುತ್ತಾ, ಎಸ್.ಬಿ.ಐ. ಆಫಿಸರ್ಸ್ ಕಾಲೋನಿಯಲ್ಲಿ ಕಾವೇರಿ ನೀರು ಸರಿಯಾಗಿ ಸರಬರಾಜು ಆಗುತ್ತಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತ, ಸಂಬಂಧಪಟ್ಟವರಿಗೆ ತಿಳಿಸಲು ವಾರ್ಡ್ ಕಾರ್ಯದರ್ಶಿಗೆ ಸೂಚಿಸಿದರು.

9. ವಾರ್ಡ್ ಕಮಿಟಿ ಸದಸ್ಯರುಗಳು ಮಾತನಾಡುತ್ತಾ, ಕಂದಾಯ ಇಲಾಖೆಗೆ ಒಂಟಿ ಮನೆಗಳಿಗೆ ಸಂಬಂಧಪಟ್ಟ ಕಡತಗಳನ್ನು ಸಲ್ಲಿಸಿ, 8 ತಿಂಗಳು ಕಳೆದರು ಸಹ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತ, ಈ ಕೂಡಲೇ ಕಡತಳನ್ನು ಪರಿಶೀಲಿಸಿ, ಹಿಂಬರಹ ನೀಡಬೇಕೆಂದು ಸಭೆಯಲ್ಲಿ ಹಾಜರಿದ್ದ ಕಂದಾಯ ಅಧಿಕಾರಿಗಳಿಗೆ ಸೂಚಿಸಿದರು. ಮತ್ತು ಮುಂದಿನ ಸಭೆಗೆ ಸಹಾಯಕ ಕಂದಾಯ ಅಧಿಕಾರಿಗಳು ಖುದ್ದಾಗಿ ಹಾಜರಾಗಬೇಕೆಂದು ಸಭೆಗೆ ತಿಳಿಸಿದರು.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ

ನೋಡಲ್ ಅಧಿಕಾರಿಗಳು
ವಾರ್ಡ್ ನಂ. 101

Scanned by CamScanner